ಓ.ಎಸ್ಃ 240-2015

ಪಿ. ಡಬ್ಲ್ಯೂ ಃ 02

**<u>ಸಾಕ್ಷಿಗೆ ದಿನಾಂಕ 22.12.2021 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ. ಸಿ ಆರ್ ಎಸ್ ವಕೀಲರಿಂದ</u>**

ಓ ಎಸ್ 245/1988 ರ ದಾವೆ ನಡೆಯುತ್ತಿದ್ದಾಗ ನನಗೆ 3 ವರ್ಷ ವಯಸ್ಸಾಗಿತ್ತು. ಸದರಿ ದಾವೆಯಲ್ಲಿ ಸಲ್ಲಿಸಿದ ನಿಪಿ 6 ದಾಖಲೆಯನ್ನು ನಾನು ನೋಡಿಲ್ಲ. ನಿಪಿ 6 ದಾನಪತ್ರವಾಗಿದೆ. ದಾವ ಷೆಡ್ಯೂಲ್ ಸ್ವತ್ತಿನ ಚೆಕ್ ಬಂದಿ ಪೂಃಮಾರಮ್ಮನ ದೇವಸ್ಥಾನ, ಪಃ ಸೀತಮ್ಮ ರವರ ಮನೆ, ಉಃ ಸಿದ್ದಯ್ಯ ರವರ ಮನೆ, ದಃ ಖಾಲಿ ನಿವೇಶನ ಹಾಗೂ ಗುಂಬಜ್ ರೋಡ್ ಇರುತ್ತದೆ. ನಿಪಿ 6 ರ ಸ್ವತ್ತಿಗೆ ಪೂಃ ಸಿದ್ದಯ್ಯ ರವರ ಮನೆ, ಪಃ ರುಕ್ಮಣಿಯಮ್ಮ ರವರ ಮನೆ, ಉಃ ಬೋರಯ್ಯ ಹಾಗೂ ನಿಂಗಮ್ಮ ರವರ ಮನೆ , ದಃ ರಸ್ತೆಯ ನಂತರ ವಾದಿಯ ಸ್ವತ್ತು ಈ ರೀತಿಯಾಗಿ ಚೆಕ್ ಬಂದಿ ಇರುತ್ತದೆ.

ನನ್ನ ಮಾವ 1995 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ನನ್ನ ಮಾವ ತೀರಿಕೊಂಡ ನಂತರ ನನ್ನ ಅತ್ತೆ ಕುಟುಂಬದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು, ನನ್ನ ಅತ್ತೆ ತೀರಿಕೊಂಡ ನಂತರ ನನ್ನ ಗಂಡ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ನನ್ನ ಗಂಡನಿಗೆ ದಾವೆಯ ಎಲ್ಲಾ ವಿಚಾರಗಳು ಗೊತ್ತಿರುತ್ತದೆ. ನನ್ನ ಗಂಡನಿಗೆ ನ್ಯಾ.ಕ್ಕೆ ಬಂದು ಸಾಕ್ಷ್ಯ ನುಡಿಯಲು

ಯಾವುದೇ ತೊಂದರೆ ಇಲ್ಲ. ವಾದಿ ದಾವ ಷೆಡ್ಯೂಲ್ ಸ್ವತ್ತಿನಲ್ಲಿ ತಳಪಾಯ ಹಾಕಲು ಪರವಾಣಿಗೆಯನ್ನು ಪಡೆದುಕೊಂಡಿರುತ್ತಾರೆ ನಾನು ಪರವಾಣಿಗೆಯನ್ನು ನೋಡಿಲ್ಲ. ದಾವ ಷೆಡ್ಯೂಲ್ ಸ್ವತ್ತನ್ನು ವಾದಿ ಶಾರದಮ್ಮ ರವರಿಂದ ಖರೀದಿಸಿರುತ್ತಾರೆ. ವಾದಿ ನನ್ನ ಗಂಡನ ಸೋದರ ಅತ್ತೆ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ವಾದಿ ನನಗೆ ಸಂಬಂಧಿಕರಾಗಿದ್ದರಿಂದ ವಾದಿಯ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ